ಹಾವೇರಿ ವಿಶ್ವವಿದ್ಯಾಲಯ, ಹಾವೇರಿ
ಕೆರಿಮತ್ತಿಹಳ್ಳಿ, ಹಾವೇರಿ-581110
ಪರೀಕ್ಷಾ ವಿಭಾಗ
HAVERI UNIVERSITY, HAVERI
Kerimattihalli, Haveri-581110
Exam Section

Dr. Vijayalaxmi Tirlapur
Registrar (Evaluation)

Phone No: 8310363548
Email_id: regehuhk@gmail.com
Website: www.haveriuniversity.ac.in

**Ref No: HUHK/RE/2024-25/515** **Date: 15.11.2024**

## ಅಧಿಸೂಚನೆ

**ವಿಷಯ:** ಜನೆವರಿ / ಫೆಬ್ರವರಿ 2025ರಲ್ಲಿ ಜರಗುವ ಎಲ್ಲ ಸ್ನಾತಕ ಪದವಿಯ ರಾಷ್ಟ್ರೀಯ ಶಿಕ್ಷಣ ನೀತಿ 2020 ಎನ್.ಇ.ಪಿ. ಅಡಿಯಲ್ಲಿ ಮೂರನೇ ಸೆಮಿಸ್ಟರ್ ರೆಗ್ಯುಲರ್ / ರಿಪೀಟರ್ ಪರೀಕ್ಷಾ ಅರ್ಜಿ ಮತ್ತು ಶುಲ್ಕ ಭರಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಆದೇಶ ದಿನಾಂಕ:

*****************

ಎಲ್ಲ ಸ್ನಾತಕ ಪದವಿಯ ರಾಷ್ಟ್ರೀಯ ಶಿಕ್ಷಣ ನೀತಿ - 2020 ಎನ್.ಇ.ಪಿ. ಅಡಿಯಲ್ಲಿ 3ನೇ ಸೆಮಿಸ್ಟರ್ ರೆಗುಲರ್ ಕೋರ್ಸ್‌ಗಳ ಲಿಖಿತ ಪರೀಕ್ಷೆಗಳು ಜನೆವರಿ / ಫೆಬ್ರವರಿ 2025ರಲ್ಲಿ ಜರಗುವವು, ಸದರಿ ಪರೀಕ್ಷೆಗಳ ವಿವರವಾದ ವೇಳಾ ಪಟ್ಟಿಯನ್ನು ಹಾವೇರಿ ವಿಶ್ವವಿದ್ಯಾಲಯ ಅಂತರ್ಜಾಲದಲ್ಲಿ ಹಾಗೂ UUCMS ತಂತ್ರಾಂಶದಲ್ಲಿ ನಂತರ ಪ್ರಕಟಿಸಲಾಗುವುದು.

ಹಾವೇರಿ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರು ವಿದ್ಯಾರ್ಥಿಗಳಿಂದ UUCMS ತಂತ್ರಾಂಶದ ಮೂಲಕ ಅರ್ಜಿ ಮತ್ತು ಶುಲ್ಕಗಳನ್ನು ಭರಿಸುವಾಗ ಈ ಕೆಳಗಿನ ವಿವರವಾದ ಸೂಚನೆಗಳನ್ನು ಹಾಗೂ ಕೊನೆಯ ದಿನಾಂಕವನ್ನು ತಪ್ಪದೇ ಗಮನಿಸಬೇಕು. ಪರೀಕ್ಷಾ ವಿಭಾಗಕ್ಕೆ ಹಾಗೂ ಹಣಕಾಸು ವಿಭಾಗಕ್ಕೆ ಅರ್ಜಿ ಸಲ್ಲಿಸುವಾಗ ಪಾವತಿಸಿದ ಮೂಲ ಚಲನ್ ಪ್ರತಿ ಹಾಗೂ ಅಗತ್ಯ ದಾಖಲೆಗಳ ಝುರಾಕ್ಸ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಬೇಕು.

1. ದಿನಾಂಕ: **19-11-2024** ರಿಂದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **28-11-2024.**

2. ವಿದ್ಯಾರ್ಥಿಗಳು ರೂ.**250** ಮೊದಲನೇಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30-11-2024.**

3. ವಿದ್ಯಾರ್ಥಿಗಳು ರೂ.**300** ಎರಡನೇಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **02-12-2024.**

4. ಪ್ರಾಚಾರ್ಯರು ತಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು UUCMS ತಂತ್ರಾಂಶದ ಮೂಲಕ ಪರೀಕ್ಷಾ ಭರ್ತಿ ಮಾಡಿದ ಪರೀಕ್ಷಾ ಅರ್ಜಿ ಮತ್ತು ಶುಲ್ಕದ ವಿವರವನ್ನು ಪರಿಶೀಲಿಸಿ ಯಾದಿಯನ್ನು ದಿನಾಂಕ: **05-12-2024**ರ ಒಳಗಾಗಿ ವಿಶ್ವವಿದ್ಯಾಲಯ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.

## ವಿಶೇಷ ಸೂಚನೆಗಳು

1. ಹಾವೇರಿ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಮಹಾವಿದ್ಯಾಲಯಗಳು ಪ್ರತಿ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಕೆಲವೊಂದು ಮಹಾ ವಿದ್ಯಾಲಯಗಳಿಂದ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೇ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದನ್ನು ಪರಿಗಣಿಸಲಾಗುವುದಿಲ್ಲ. ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೆ ಇದ್ದಲ್ಲಿ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಕ್ರಮಗಳನ್ನು ಮುಂದುವರೆಸುವುದಕ್ಕೆ / ವಿಸ್ತರಿಸುವುದಕ್ಕೆ ಮಾನ್ಯತೆ ಇರುವುದಿಲ್ಲ ಹಾಗೂ ಅಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ತುಂಬಲು ಸಹ ಅರ್ಹರಿರುವುದಿಲ್ಲ. ಆದ್ದರಿಂದ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವಾಗ ಸಿಡಿಸಿ/ಸಂಯೋಜನೆ ವಿಭಾಗದಿಂದ ಪಡೆದ ಪ್ರಸಕ್ತ ವರ್ಷದ ಅಧಿಸೂಚನೆಯನ್ನು ಕಡ್ಡಾಯವಾಗಿ ಲಗತ್ತಿಸುವದು.

## ಸೂಚನೆಗಳು

1. UUCMS ಅಂತರ್ಜಾಲದ ಮೂಲಕ ವಿದ್ಯಾರ್ಥಿಗಳು ಸಲ್ಲಿಸಿದ ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಸಹಿ ಮಾಡಬೇಕು. ಪ್ರತಿ ಸೆಮೆಸ್ಟರ್ ಪ್ರತಿ ವಿಷಯದಲ್ಲೂ ಕನಿಷ್ಠ 75% ಹಾಜರಾತಿಯನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ನಮೂನೆಗಳನ್ನು ರದ್ದುಪಡಿಸುವ ಶರತ್ತುಗಳಿಗೆ ಒಳಪಟ್ಟಿರುತ್ತದೆ. ಮಹಾವಿದ್ಯಾಲಯಗಳ ಪ್ರಾಚಾರ್ಯರ ಕೋರಿಕೆಯ ಮೇರೆಗೆ ಅಂತಹ ವಿದ್ಯಾರ್ಥಿಗಳ ಪರೀಕ್ಷೆಯ ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ್) ಫ್ರೀಜ್/ ತಡೆಹಿಡಿಯಲಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಅಂತರ್ಜಾಲದಲ್ಲಿ ಭರ್ತಿ ಮಾಡಿದ ಪರೀಕ್ಷಾ ಅರ್ಜಿಯ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ನೀಡುವುದಿಲ್ಲ. ಯು.ಜಿ.ಸಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಕಡ್ಡಾಯವಾಗಿ 75% ರಷ್ಟು ಹಾಜರಾತಿಯನ್ನು ಪೂರೈಸಿರಬೇಕು.
2. ಪರೀಕ್ಷಾ ಶುಲ್ಕದ ಜೊತೆಗೆ ಪ್ರತಿ ವಿದ್ಯಾರ್ಥಿಯು ರೂ.200/– ನ್ನು ಅಂತರ್ಜಾಲಕ ಪರೀಕ್ಷಾ ಅರ್ಜಿ ನಮೂನೆಯ ಪ್ರಕ್ರಿಯೆ ಶುಲ್ಕವನ್ನು (ಪ್ರತಿ ಸೆಮೆಸ್ಟರ್‌ಗೆ) ಹಾಗೂ ರೂ.195/- ನ್ನು ಅಂಕಪಟ್ಟಿ ಶುಲ್ಕವೆಂದು ಪಾವತಿಸುವುದು.
3. **ಕರ್ನಾಟಕ ಸರ್ಕಾರವು SSP ಮೂಲಕ SC/ST/Cat-I/IIA/IIB/IILA/IIIB ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಅರ್ಹ ವಿದ್ಯಾರ್ಥಿಗಳ ಖಾತೆ ನೇರವಾಗಿ ವರ್ಗಾಯಿಸುವುದರಿಂದ ಅಂತಹ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸುವುದು.**
4. ವಿಶ್ವವಿದ್ಯಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಯಾವುದೇ ಪರೀಕ್ಷಾ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ/ಪರಿಗಣಿಸಲಾಗುವುದಿಲ್ಲ. ಅಲ್ಲದೆ, UUCMS ಅಂತರ್ಜಾಲದ ಮೂಲಕ ಭರಿಸಿದ ಪರೀಕ್ಷಾ ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಭರ್ತಿಮಾಡಲು ನೇರವಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸದಿರಲು ವಿದ್ಯಾರ್ಥಿಗಳಿಗೆ ತಿಳಿಸಲು ಎಲ್ಲ ಕಾಲೇಜುಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.
5. ಮಹಾವಿದ್ಯಾಲಯದ ಪ್ರಾಚಾರ್ಯರು ಎಲ್ಲ ವಿದ್ಯಾರ್ಥಿಗಳ ಮಾಹಿತಿ ಯಾದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು (ಹಾರ್ಡ್ ಕಾಪಿ) ಅವಶ್ಯ ದಾಖಲುಗಳೊಂದಿಗೆ/ನಕಲು (ಝರಾಕ್ಸ) ದ್ವಿಪ್ರತಿಯೊಂದಿಗೆ ನೇರವಾಗಿ ಕಚೇರಿ ಪರೀಕ್ಷಾ ವಿಭಾಗ ಹಾಗೂ ಹಣಕಾಸು ವಿಭಾಗ, ಹಾವೇರಿ ವಿಶ್ವವಿದ್ಯಾಲಯ ಕೆರಿಮತ್ತಿಹಳ್ಳಿ ಹಾವೇರಿ–581110 ಅಂಚೆ ಮೂಲಕ ಅಥವಾ ಖುದ್ದಾಗಿ ಮಹಾವಿದ್ಯಾಲಯದವರು ಸಲ್ಲಿಸುವುದು.
6. UUCMS ಮೂಲಕ ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ತುಂಬಿಸುವಾಗ ತಿದ್ದುಪಡಿಯನ್ನು ತಪ್ಪಿಸಲು ಮಹಾವಿದ್ಯಾಲಯದ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುವುದು ಯಾವುದೇ ತಿದ್ದುಪಡಿಗಳು / ತಪ್ಪುಗಳು

ಉಂಟಾದರೆ ಮಹಾವಿದ್ಯಾಲಯಗಳೇ ಜವಾಬ್ದಾರರಾಗಿರುತ್ತಾರೆ. ಹಾ.ವಿ.ವಿ. **Under Section 74 & 75 of K.S.U. Act 2000** ನಿಯಮಾವಳಿ/ಆರ್ಡಿನೆನ್ಸ್ ಪ್ರಕಾರ ಪ್ರಾಚಾರ್ಯರು ದಂಡಕ್ಕೆ ಬಾಧ್ಯಸ್ಥರಾಗುತ್ತಾರೆ.

7. ಪರೀಕ್ಷೆಗೆ ಸಂಬಂಧಿಸಿದಂತೆ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡಿದ ನಂತರ ಯಾವುದೇ ಕಾರಣಕ್ಕೂ ಮರಳಿ ಕೊಡುವದಿಲ್ಲ.

8. ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್.ಇ.ಪಿ) ಅಡಿಯಲ್ಲಿ ನೊಂದಣಿ ಮಾಡಿದ ರೆಗ್ಯುಲರ್ / ರಿಪೀಟರ್ ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು ಪದವಿ/ಸೆಮಿಸ್ಟರ್‌ವಾರು ಈ ಅಧಿಸೂಚನೆಯೊಂದಿಗೆ ಲಗತ್ತಿಸಿದಲ್ಲಿ (Annexure-'A') ಪ್ರತ್ಯೇಕವಾಗಿ ಸಿದ್ದಪಡಿಸಿ ಹಾರ್ಡ್ ಕಾಫಿ ಮತ್ತು ಸಾಫ್ಟ್ ಕಾಫಿಯನ್ನು ಪರೀಕ್ಷಾ ಶಾಖೆಯ ಸಂಬಂಧಿಸಿದ ವಿಭಾಗಕ್ಕೆ ಸಲ್ಲಿಸುವುದು.

9. **ಪರೀಕ್ಷಾ ಅರ್ಜಿ ಶುಲ್ಕವನ್ನು Debit Card / Credit Card / Bank Applicationಗಳ ಮೂಲಕ ಮಾತ್ರ ಪಾವತಿಸಬೇಕು. ಒಂದು ವೇಳೆ Third Party Application (PhonePe) ಗಳ ಮೂಲಕ ಪಾವತಿಸಿ ಅದು ಯಶಸ್ವಿಯಾಗದಿದ್ದರೆ ವಿಶ್ವವಿದ್ಯಾಲಯದವರು ಜವಾಬ್ದಾರರಲ್ಲ.**

**ರೆಗ್ಯುಲರ್ / ರಿಪೀಟರ್ ಪರೀಕ್ಷಾ ಶುಲ್ಕದ ವಿವರ ಈ ಕೆಳಗಿನಂತಿದೆ.**

| ಅ.ನಂ. | ವಿವರ | ಶುಲ್ಕ |
|---|---|---|
| | **ರೆಗ್ಯುಲರ್ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ** | |
| 1 | ಅಂತರ್ಜಾಲ ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | 200/- |
| 2 | ಅಂಕಪಟ್ಟಿ ಶುಲ್ಕ | 195/- |
| 3 | ಪರೀಕ್ಷಾ ಶುಲ್ಕ: ಬಿ.ಎ. / ಬಿ.ಎಸ್ಸಿ. /ಬಿ.ಕಾಂ. 2ನೇ ಸೆಮಿಸ್ಟರ್ | 1095/- |
| 4 | ಪರೀಕ್ಷಾ ಶುಲ್ಕ: ಬಿ.ಬಿ.ಎ. / ಬಿ.ಸಿ.ಎ. 2ನೇ ಸೆಮಿಸ್ಟರ್ | 1295/- |
| | **ರಿಪೀಟರ್ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ** | |
| 5 | ಲಿಖಿತ ಪರೀಕ್ಷಾ ಶುಲ್ಕ: ಬಿ.ಎ. / ಬಿ.ಎಸ್ಸಿ. / ಬಿ.ಕಾಂ. 1ನೇ ಸೆಮಿಸ್ಟರ್<br>1 ಪೇಪರ್ ರೂ.310, 2 ಪೇಪರ್ ರೂ.620, 3 ಪೇಪರ್ ರೂ.930, 4 ಕ್ಕಿಂತ ಮೇಲ್ಪಟ್ಟ ಪೇಪರ್ ರೂ.1095 | 1095/- |
| | ಲಿಖಿತ ಪರೀಕ್ಷಾ ಶುಲ್ಕ: ಬಿ.ಬಿ.ಎ. / ಬಿ.ಸಿ.ಎ. 1ನೇ ಸೆಮಿಸ್ಟರ್<br>1 ಪೇಪರ್ ರೂ.365, 2 ಪೇಪರ್ ರೂ.730, 3 ಪೇಪರ್ ರೂ.1095, 4 ಕ್ಕಿಂತ ಮೇಲ್ಪಟ್ಟ ಪೇಪರ್ ರೂ.1295 | 1295/- |
| 6 | ಲಿಖಿತ ಮತ್ತು ಪ್ರಾಯೋಗಿಕ ಪರೀಕ್ಷಾ ಶುಲ್ಕ: ಬಿ.ಎ. / ಬಿ.ಎಸ್ಸಿ. / ಬಿ.ಕಾಂ. 1ನೇ ಸೆಮಿಸ್ಟರ್<br>1 ಪೇಪರ್ ರೂ.310 + ಪ್ರಾಯೋಗಿಕ 200,<br>2 ಪೇಪರ್ ರೂ.620 + ಪ್ರಾಯೋಗಿಕ 200,<br>3 ಪೇಪರ್ ರೂ.930 + ಪ್ರಾಯೋಗಿಕ 200,<br>4 ಕ್ಕಿಂತ ಮೇಲ್ಪಟ್ಟ ಪೇಪರ್ ರೂ.1095 + ಪ್ರಾಯೋಗಿಕ 200 | 510/-<br>820/-<br>1130/-<br>1295/- |
| | ಲಿಖಿತ ಮತ್ತು ಪ್ರಾಯೋಗಿಕ ಪರೀಕ್ಷಾ ಶುಲ್ಕ: ಬಿ.ಬಿ.ಎ. / ಬಿ.ಸಿ.ಎ. 1ನೇ ಸೆಮಿಸ್ಟರ್<br>1 ಪೇಪರ್ ರೂ.365 + ಪ್ರಾಯೋಗಿಕ 200,<br>2 ಪೇಪರ್ ರೂ.730 + ಪ್ರಾಯೋಗಿಕ 200,<br>3 ಪೇಪರ್ ರೂ.1095 + ಪ್ರಾಯೋಗಿಕ 200,<br>4 ಕ್ಕಿಂತ ಮೇಲ್ಪಟ್ಟ ಪೇಪರ್ ರೂ.1295 + ಪ್ರಾಯೋಗಿಕ 200 | 565/-<br>930/-<br>1295/-<br>1495/- |
| 7 | Continuous Internal Assessment (CIA) Papers | 250/- |

ಸದರಿ ಮೇಲಿನ ಅಧಿಸೂಚನೆಯನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪರೀಕ್ಷಾ ಫಾರ್ಮ್ / ಶುಲ್ಕಗಳನ್ನು ತುಂಬಿಸಿಕೊಳ್ಳುವುದು.

15.11.24

Registrar (Evaluation)
Haveri University
Kerimattihalli, Haveri-581110

**ಪ್ರತಿ ಮಾಹಿತಿಗಾಗಿ ಹಾಗೂ ಅನುಕ್ರಮಕ್ಕಾಗಿ**

ಹಾ.ವಿ.ವಿ. ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ:**

1. ಕುಲಪತಿಗಳು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
2. ಕುಲಸಚಿವರು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
3. ವಿತ್ತಾಧಿಕಾರಿಗಳು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
4. ಕಛೇರಿ ಅಧೀಕ್ಷಕರು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
5. ನೋಡಲ್ ಅಧಿಕಾರಿಗಳು, UUCMS, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.

(Annexure–'A')

## :NEP Students Strength:

**(Regular/Repeaters)**

**Name of the College:**
**UUCMS College Code:**
**Degree & Semester:**

| SI | College Name/ College code as per UUCMS | Subject Name | UUCMS Subject Code | Total No. of Students appearing for the Exam |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

Seal & Signature of the Principal
Name:
Mobile No:

**ಸೂಚನೆ :** ನೋಂದಣಿ ಮಾಡಿದ ನಿಯಮಿತ ವಿದ್ಯಾರ್ಥಿಗಳ ಅಂಕಿ–ಅಂಶಗಳನ್ನು ಒಟ್ಟುಗೂಡಿಸಿ ವಿಷಯವಾರು ಈ ಮೇಲಿನ ನಮೂನೆ (Annexure 'A') ಯಲ್ಲಿ ಪ್ರತ್ಯೇಕವಾಗಿ ಪದವಿವಾರು/ಸೆಮಿಸ್ಟರ್‌ವಾರು ತಯಾರು ಮಾಡಿ ಹಾರ್ಡಕಾಪಿ & ಸಾಫ್ಟ್ ಕಾಪಿಯನ್ನು ಹಾವೇರಿ ವಿಶ್ವ ವಿದ್ಯಾಲಯ ಪರೀಕ್ಷಾ ವಿಭಾಗಕ್ಕೆ ಕೊರ್ಸ್ ಮುಕಾಂತರ ವಿಷಯಗಳ ಪ್ರತ್ಯೇಕವಾಗಿ ಯಾದಿಗಳನ್ನು ಸಲ್ಲಿಸತಕ್ಕದ್ದು.

**ಪರೀಕ್ಷಾ ವಿಭಾಗದ ಮೇಲ್ ವಿಳಾಸ**

ಇಮೇಲ್ ವಿಳಾಸ: regehuhk@gmail.com